# ಸುದೀಪ್‌ರ ಹೊಸ ಪೋಷಾಕು!



ಭಾರತದ ಸೈನಿಕರು ಪಾಕಿಸ್ತಾನದ ಗಡಿ ಪ್ರದೇಶದಲ್ಲಿ ಇತ್ತೀಚೆಗೆ ನಡೆಸಿದ ಮಿಂಚಿನ ಕಾರ್ಯಾಚರಣೆಯ ಸುದ್ದಿ ಚರ್ಚೆಯಲ್ಲಿರುವ ಸಂದರ್ಭದಲ್ಲಿ, ಸೇನಾ ಅಧಿಕಾರಿಯ ಪೋಷಾಕಿನಲ್ಲಿರುವ ಸುದೀಪ್ ಚಿತ್ರಗಳು ಗಾಂಧಿನಗರದಲ್ಲಿ ಕುತೂಹಲ ಕೆರಳಿಸಿದೆ. ಈ ಛಾಯಾಚಿತ್ರಗಳು 'ಹೆಬ್ಬುಲಿ' ಚಿತ್ರಕ್ಕೆ ಸಂಬಂಧಿಸಿದವು.

'ಗಜಕೇಸರಿ' ಚಿತ್ರದ ನಂತರ ಕೃಷ್ಣ ಅವರು ನಿರ್ದೇಶಿಸುತ್ತಿರುವ ಸಿನಿಮಾ 'ಹೆಬ್ಬುಲಿ'. ಈ ಹುಲಿ ಕೂಡ ಶತ್ರುಪಾಳಯದೊಳಗೆ ನುಗ್ಗಿ ತನ್ನ ಸಾಹಸ ಮೆರೆಯುತ್ತದಂತೆ. ಹುಲಿಯಂಥ ಸಾಹಸಿ ಸೈನಿಕನ ಪಾತ್ರದಲ್ಲಿ ಸುದೀಪ್ ಅದ್ಭುತವಾಗಿ ಕಾಣಿಸಿಕೊಂಡಿದ್ದಾರಂತೆ. ಶತ್ರುಗಳಿಗೆ ನೆಲೆ ಕೊಟ್ಟ ದೇಶದೊಳಗೆ ನುಗ್ಗಿ ಅವರನ್ನು ಬೇಟೆಯಾಡುವ ಕಮಾಂಡರ್‌ನ ಕಥೆ ಚಿತ್ರದಲ್ಲಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಕಾಶ್ಮೀರದಲ್ಲಿ ಚಿತ್ರೀಕರಣ ನಡೆಸಿರುವುದು 'ಹೆಬ್ಬುಲಿ'ಯ ವಿಶೇಷ. ಸುದೀಪ್, ಅಮಲಾ ಪೌಲ್, ಚಿಕ್ಕಣ್ಣ ಸೇರಿದಂತೆ ಐವತ್ತು ಕಲಾವಿದರ ತಂಡದೊಂದಿಗೆ ನಿರ್ದೇಶಕ ಕೃಷ್ಣ ಕಾಶ್ಮೀರದಲ್ಲಿ ಶೂಟಿಂಗ್ ನಡೆಸಿದ್ದಾರೆ. ಅಲ್ಲಿ ಪ್ರಕ್ಷುಬ್ಧ ವಾತಾವರಣ ಇದ್ದುದರಿಂದ ರಾತ್ರಿ ಹೊತ್ತಲ್ಲಿ ಚಿತ್ರೀಕರಣ ನಡೆಸಿದರಂತೆ. ಆರು ದಿನಗಳ ಕಾಲ ಕಾಶ್ಮೀರದಲ್ಲಿ ನಡೆಸಿರುವ ಚಿತ್ರೀಕರಣ ಚಿತ್ರದ ಹೈಲೈಟ್ ಆಗಲಿದೆ.

ಸುದೀಪ್ ಮತ್ತು ರವಿಚಂದ್ರನ್‌ರ ಯಶಸ್ವಿ ಜೋಡಿ 'ಹೆಬ್ಬುಲಿ'ಯಲ್ಲಿ ಮತ್ತೆ ಮುಂದುವರೆದಿದೆ. ಕರುಣಾಕರ್ ಛಾಯಾಗ್ರಹಣ, ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ. 'ಕೋಟಿಗೊಬ್ಬ 2' ಯಶಸ್ಸಿನ ಬೆನ್ನಿನಲ್ಲಿ ರೂಪುಗೊಳ್ಳುತ್ತಿರುವ 'ಹೆಬ್ಬುಲಿ' ಅದ್ದೂರಿ ಬಜೆಟ್‌ನ ಚಿತ್ರವೂ ಹೌದು.

